| Deposition Sheets (RP.No.57) Form No.4 |
|---|

**IN THE COURT OF PRL. CIVIL JUDGE & J.M.F.C., KARKALA.**

**Criminal Case No. 533/2024**

ಪಿಡ್ಲ್ಯೂಃ 4 ಸಿಡ್ಲ್ಯೂಃ 4

ಸಾಕ್ಷಿದಾರನ ಹೆಸರು : ರಾಜೇಂದ್ರ ಶೆಟ್ಟಿಗಾರ್
ತಂದೆಯ ಹೆಸರು : ಸುಂದರ ಶೆಟ್ಟಿಗಾರ್
ಪ್ರಾಯ : 36 ವರ್ಷ
ಉದ್ಯೋಗ : ಖಾಸಗಿ
ವಾಸ : ನಂದಳಿಕೆ

ದಿನಾಂಕ 14.05.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ಚಾಸಾ-2 ರವರ ಪರಿಚಯ ಇದೆ.

ದಿಃ26.01.2024 ರಂದು ನಂದಳಿಕೆ ಗ್ರಾಮದ ಮಾವಿನ ಕಟ್ಟೆಗೆ ಸ್ಥಳ ಮಹಜರು ಮಾಡಲು ಪೊಲೀಸರು ನನ್ನನ್ನು ಕರೆದಿರುತ್ತಾರೆ. ಚಾಸಾ-2 ಮತ್ತು 5 ರವರು ನನ್ನ ಜೊತೆ ಇದ್ದರು. ಮಹಜರು ಸಮಯದಲ್ಲಿ 2 ಕಾರುಗಳನ್ನು ಸ್ವಾ ಧೀನಪಕೊಂಡಿರುತ್ತಾರೆ. ಸದ್ರಿ ಮಹಜರಿಗೆ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಈಗ ಆ ದಾಖಲೆ ನಾನು ನೋಡಿದ್ದು ಅದರಲ್ಲಿ ನನ್ನ ಸಹಿ ಇದೆ. ಸದ್ರಿದಾಖಲೆಯನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ಸದ್ರಿ ಮಹಜರು ವೇಳೆಯಲ್ಲಿ ನಾಕಶೆಯನ್ನು ಮಾಡಿರುತ್ತಾರೆ. ಸದ್ರಿ ದಾಖಲೆಯನ್ನು ನಾನು ನೋಡಿದ್ದು ಅದನ್ನು

ಈಗಾಗಲೇ ನಿಪಿ-4 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-4(ಬಿ) ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ಫೋಟೊ ನಿಪಿ-5(ಎ) ಮತ್ತು 5(ಬಿ) ಮಹಜರು ವೇಳೆಯಲ್ಲಿ ತೆಗೆದ ಫೊಟೋ ಆಗಿರುತ್ತದೆ. ಈಗ ನನಗೆ ತೋರಿಸಿದ ಫೋಟೊ ಮಹಜರು ವೇಳೆಯಲ್ಲಿ ತೆಗೆದ ಫೋಟೋ ಆಗಿರುತ್ತದೆ. ಸದ್ರಿ 2 ಫೊಟೋಗಳನ್ನು ಒಟ್ಟಾಗಿ ನಿಪಿ-7 ಎಂದು ಗುರುತಿಸಲಾಯಿತು. ಪೊಲೀಸರು ಸ್ವಾಧೀನಪಡಿಸಿಕೊಂಡ 2 ಕಾರುಗಳನ್ನು ನಿಪಿ-6 ಭಾವಚಿತ್ರದಲ್ಲಿ ನೋಡಿ ಗುರುತಿಸಿದ್ದೇನೆ. ಈಗ ನನಗೆ ತೋರಿಸಿದ 2 ಭಾವಚಿತ್ರದಲ್ಲಿ ಸಾವಧೀನಪಡಿಸಿಕೊಂಡ 2 ಕಾರುಗಳಿದ್ದು ಸದ್ರಿ ಭಾವಚಿತ್ರವನು ನಿಪಿ-8 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು :</u> ಆರೋಪಿ ಪರ : ಶ್ರೀ ಎಂ ಕೆ ವಿ ಕೆ ವಕೀಲರಿಂದಃ

ನಿಪಿ-5 ಭಾವಚಿತ್ರವನ್ನು ಪೊಲೀಸರು ಸ್ಥಳದಲ್ಲಿ ತೆಗೆದಿರುತ್ತಾರೆ. ನಿಪಿ-5 ಮತ್ತು 7 ಭಾವಚಿತ್ರದಲ್ಲಿ ಇರುವ ಕಾರುಗಳು ಅಪಘಾತವಾದ ಸಮಯದಲ್ಲಿ ಹೇಗೆ ಇದ್ದವು ಹಾಗೇ ಇಲ್ಲ ಎಂದರೆ ಸರಿ. ನಾನು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿರುವುದಿಲ್ಲ. ಸದ್ರಿ ಅಪಘಾತದ ಸ್ಥಳವನ್ನು ಮಹಜರು ಮಾಡುವಾಗ ಪೊಲೀಸರು ತೋರಿಸಿದರು ಎಂದರೆ ಸರಿ. ಅಪಘಾತ ಸ್ಥಳವು ನಾನು ದಿನಾಲೂ ಓಡಾಡುವ ರಸ್ತೆ ಎಂದರೆ ಸರಿ. ಪಡುಬಿದ್ರೆ ಕಡೆಯಿಂದ ಬರುವಾಗ ತಿರುವು ಇದೆ ನಿಧಾನವಾಗಿ ಚಲಿಸಿ ಎಂಬ ಸೈನ್ ಬೊರ್ಡ್ ಇರುತ್ತದೆ ಎಂದರೆ ಪೈಂಟಿನಲ್ಲಿ ಹಾಕಿದ್ದಾರೆ. ಪಡುಬಿದ್ರೆ ಕಡೆಯಿಂದ ಬರುವ ವಾಹನಗಳು ಸದ್ರಿ ಸೈನ್ ಬೋರ್ಡ್ ಇರುವ ಕಾರಣ ವೇಗವಾಗಿ ಚಲಿಸುವಂತಹ ವಾಹನಗಳು ಕೂಡಾ ಬ್ರೇಕ್ ಹಾಕಿ ನಿಧಾನವಾಗಿ ಬರಬೇಕು ಎಂದರೆ ಸರಿ.

ರಾಷ್ಟ್ರೀಯ ಹೆದ್ದಾರಿ ಆದ ಕಾರಣ ತುಂಬಾ ವಾಹನಗಳು ವೇಗವಾಗಿ ಚಲಿಸುತ್ತವೆ ಎಂದರೆ ಸರಿ. ರಾಷ್ಟ್ರೀಯ ಹೆದ್ದಾರಿಯ ಎಲೆಲ್ಲಿ ನಿಧಾನವಾಗಿ ಚಲಾಯಿಸಬೇಕು ಎಂದು ಸೈನ್ ಬೋರ್ಡ್ ಗಳನ್ನು ಹಾಕಿರುತ್ತಾರೆ ಮತ್ತು ಅದಕ್ಕೆ ತಕ್ಕಂತೆ ಪೈಂಟಿನಲ್ಲಿ ಗುರುತನ್ನು ಮಾಡಿರುತ್ತಾರೆ ಎಂದರೆ ಸರಿ. ರಾಷ್ಟ್ರೀಯ ಹೆದ್ದಾರಿಯ ನಡುಭಾಗದಲ್ಲಿ ಪೈಂಟಿಂಗ್ ನಲ್ಲಿ ಗುರುತು ಮಾಡಿರುತ್ತಾರೆ. ಪಡುಬಿದ್ರೆ ಕಡೆಯಿಂದ ಬರುವ ವಾಹನಗಳು ನಡುವಿನಲ್ಲಿ ಪೈಂಟ್

ಹಾಕಿದ ಕಾರಣ ಎಡಬದಿಯಲ್ಲಿಯೇ ಬರಬೇಕು. ಕಾರ್ಕಳ ಕಡೆಯಿಂದ ಪಡುಬಿದ್ರೆಗೆ ಹೋಗುವ ವಾಹನಗಳು ಆ ಪೈಂಟಿನ ಎಡ ಬದಿಯಲ್ಲಿ ಹೋಗಬೇಕು. ನಿಪಿ-5 ಭಾವಚಿತ್ರದಲ್ಲಿ ಕಾರು ಟಯರ್ ನ ಬ್ರೇಕ್ ಮಾರ್ಕ್ ಗಳು ನಡು ಬಂದು ಎಡಬದಿಯಲ್ಲಿ ಇವೆ. ಮಹಜರು ಮಾಡುವಾಗ ಕಾರ್ಕಳ ಕಡೆಯಿಂದ ಪಡುಬಿದ್ರೆ ಕಡೆಗೆ ಚಲಿಸಿದ ವಾಹನದ ಬ್ರೇಕ್ ಮಾರ್ಕ್ ಎಂದು ಗೊತ್ತಾಯಿತು. ಅದೇ ಅಪಘಾತಕ್ಕೆ ಸಂಭಂದಪಟ್ಟ ಕಾರು ಪಡುಬಿದ್ರೆಯಿಂದ ಕಾರ್ಕಳ ಕಡೆಗೆ ಬಂದದ್ದು ವಾಹನದ ಬ್ರೇಕ್ ಮಾರ್ಕ್ ಕಾಣಿಸುವುದಿಲ್ಲ. ಆದ ಕಾರಣ ಪಡುಬಿದ್ರೆಯಿಂದ ಕಾರ್ಕಳ ಕಡೆಗೆ ಬರುವ ವಾಹನ ಆ ಸಮಯದಲ್ಲಿ ರಾಷ್ಟ್ರೀಯ ಹೆದ್ದಾರಿಯ ಯಾವ ಭಾಗದಲ್ಲಿ ಬರುತ್ತಿತ್ತು ಎಂದು ಗೊತ್ತಾಗುವುದಿಲ್ಲ. ಮಹಜರು ವೇಳೆಯಲ್ಲಿ ಅಪಘಾತವು ಎಡಬದಿ ಅಥವಾ ಬಲ ಬದಿಯಲ್ಲಿ ಆಗಿದೆ ಎಂದು ಗೊತ್ತಾಗಲಿಲ್ಲ. ಮಹಜರು ವೇಳೆಯಲ್ಲಿ ಅಪಘಾತ ಘರ್ಷಣೆಯಾದ ಸ್ಥಳವನ್ನು ಯಾರು ತೋರಿಸಲಿಲ್ಲ.

ನಿಪಿ-3 ಮತ್ತು 4 ದಾಖಲೆಗಳಿಗೆ ಪೊಲೀಸರು ಸತ್ಯವಾಗಿ ಮತ್ತು ಸರಿಯಾಗಿ ಬರೆದಿರುತ್ತಾರೆ ಎಂಬ ವಿಶ್ವಾಸದಿಂದ ಸಹಿ ಮಾಡಿಇರುತ್ತೇನೆ. ಆದರೆ ಅದರಲ್ಲಿ ಏನು ಬರೆದಿದೆ ಎಂಬ ಬಗ್ಗೆ ನನಗೆ ತಿಳಿದಿರುವುದಿಲ್ಲ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ